ಚಿತ್ರಪಟ ಕಥನ



# ಕ್ಯಾಮೆರಾ ಕಂಡ ಲೋಕದ ಬಿಂಬ

**ಪ್ರವಾಸ, ಚರಿತ್ರೆ, ಗ್ರಾಮೀಣ ಬದುಕು, ಜೀವವೈವಿಧ್ಯ... ಹೀಗೆ ಹಲವು ಆಯಾಮಗಳಲ್ಲಿ ತಮ್ಮ ಛಾಯಾಗ್ರಹಣ ಕಲೆಯನ್ನು ಅಭಿವ್ಯಕ್ತಗೊಳಿಸುವ ಅಭಿಲಾಷೆ ರವಿಶಂಕರ್ ಎಸ್‌. ಎಲ್‌. ಅವರದ್ದು. ಕ್ಯಾಮೆರಾ ಹಿಡಿದು ದೇಶದ ಉದ್ದಗಲಕ್ಕೂ ಸಂಚರಿಸಿರುವ ಅವರ ಛಾಯಾಚಿತ್ರವೊಂದಕ್ಕೆ ಈಚೆಗೆ ರಾಷ್ಟ್ರೀಯ ಪ್ರಶಸ್ತಿ ದೊರೆತಿದೆ.**

■ ಸುಮಲತಾ ಎನ್‌.

ಓದಿನ ನಂತರ ನೌಕರಿಗೆಂದು ಬೆಂಗಳೂರು ದಾರಿ ಹಿಡಿದಿದ್ದ ಕೋಲಾರದ ರವಿಶಂಕರ್ ಅವರಿಗೆ ಕೆಲಸದೊಂದಿಗೆ ಜೊತೆಯಾದದ್ದು ಕ್ಯಾಮೆರಾ. ನೌಕರಿ ಮಾಡುತ್ತಲೇ ಫೋಟೊಗ್ರಫಿಯನ್ನು ಹವ್ಯಾಸವಾಗಿ ಆರಂಭಿಸಿದ ಅವರಿಗೆ, ಇದೀಗ ಛಾಯಾಗ್ರಹಣವೇ ರಾಷ್ಟ್ರೀಯ ಪ್ರಶಸ್ತಿ ತಂದುಕೊಟ್ಟಿದೆ.

ರವಿಶಂಕರ್ ಎಸ್‌.ಎಲ್‌. ಅವರಿಗೂ, ಫೋಟೊಗ್ರಫಿಗೂ ಸುಮಾರು ಇಪ್ಪತ್ತೈದು ವರ್ಷಗಳ ನಂಟು. ಪಿಯುಸಿ ಮುಗಿಸಿ ಬೆಂಗಳೂರಿಗೆ ಬಂದ ಅವರು ನವಕರ್ನಾಟಕ ಪಬ್ಲಿಕೇಷನ್ಸ್‌ನಲ್ಲಿ ಗ್ರಾಫಿಕ್ ಡಿಸೈನರ್ ಆಗಿ ಸೇರಿದರು. ಗ್ರಾಫಿಕ್ ಡಿಸೈನಿಂಗ್‌ನಲ್ಲಿ ಡಿಪ್ಲೊಮಾ ಮಾಡುತ್ತಿದ್ದ ಸಂದರ್ಭದಲ್ಲೇ ಅವರಲ್ಲಿ ಫೋಟೊಗ್ರಫಿ ಕುರಿತು ಸಣ್ಣದೊಂದು ಆಸಕ್ತಿ ಹುಟ್ಟಿಕೊಂಡಿತ್ತು.

‘ನವಕರ್ನಾಟಕ ಪಬ್ಲಿಕೇಷನ್ಸ್‌ನಲ್ಲಿ ಕೆಲಸ ಮಾಡುವಾಗ ಕೆಲವು ಪುಸ್ತಕಗಳನ್ನು ನೋಡುತ್ತಿದ್ದೆ. ಜ್ಞಾನ–ವಿಜ್ಞಾನ ವಿಷಯದಲ್ಲಿ, ಬಣ್ಣದ ಪುಟಗಳಲ್ಲಿ ಎನ್‌ಸೈಕ್ಲೊಪಿಡಿಯಾ ಮಾಡುತ್ತಿದ್ದರು. ಆಗ ಅದಕ್ಕೆ ಸಾಕಷ್ಟು ಚಿತ್ರಗಳು ಬೇಕಾಗಿದ್ದವು. ಜೊತೆಗೆ, ನಾನೇ ಚಿತ್ರಗಳನ್ನು ತೆಗೆದು ಉಪಯೋಗಿಸುವ ಅವಕಾಶವೂ ಇತ್ತು. ಆಗಲೇ ನಾನು ಫೋಟೊಗ್ರಫಿಯೆಡೆಗೆ ಹೊರಳಿದ್ದು. ಅದು 1996–97ರ ಸಂದರ್ಭ.

